★ **ಈ ಸಾಹಿತ್ಯ ಸಮ್ಮೇಳನಗಳೆಂಬ ಜಾತ್ರೆಯಿಂದ ಕನ್ನಡಕ್ಕೆ, ಸಾಹಿತ್ಯಕ್ಕೆ ಏನಾದರೂ ಪ್ರಯೋಜನವಿದೆಯೆ? ಇದರಿಂದ ಕನ್ನಡದ ಕೆಲಸ ಆಗುತ್ತದೆಯೆ?**

**ಚಂಪಾ:** ಸಾಹಿತಿಗಳಿಗೆ ಲಾಭ ಆಗುತ್ತೋ ಇಲ್ಲವೋ ಗೊತ್ತಿಲ್ಲ. ಇತರರಿಗೆ ಲಾಭ ಆಗುತ್ತೆ. ಮೊದಲನೆಯದಾಗಿ, ಸರ್ಕಾರ ತನ್ನನ್ನು ಪ್ರೊಜೆಕ್ಟ್ ಮಾಡಿಕೊಳ್ಳಲು ಇದೊಂದು ದೊಡ್ಡ ಅವಕಾಶ. ಸ್ಥಳೀಯ ರಾಜಕೀಯ ಮಹತ್ವಾಕಾಂಕ್ಷೆ ಇರುವವರಿಗೆ ಕ.ಸಾ.ಪ. ದ ವೇದಿಕೆ ಚಿಮ್ಮುಹಲಗೆ ಇದ್ದಂತೆ. ಅವರಿಗೂ ಕನ್ನಡದ ಮೇಲೆ ಪ್ರೀತಿ ಇರುತ್ತದೆ, ಇಲ್ಲವೆಂದಲ್ಲ.

ನಾವು ಜಾತ್ರಿ, ಸಂತಿ ಅಂತೀವಲ್ಲ.. ಅದು ಬೇಕು. ನಾವ್ ಹಳ್ಳೀ ಕಡಿಯಿಂದ ಬಂದವರು. ನಮಗೆ ಜಾತ್ರಿ ಬಹಳ ಮುಖ್ಯ. ಇದು ಅಕ್ಷರದ ಜಾತ್ರಿ, ಕನ್ನಡದ ಜಾತ್ರಿ. ಇಲ್ಲಿ ಪ್ರದೇಶ, ಜಾತಿ, ಕೋಮು, ಭಾಷೆಗಳ ಬೇಧಭಾವ ಇಲ್ಲ.



ಇದೊಂದು ಮೆಗಾ ಇವೆಂಟ್. ಆದರೆ ಇಲ್ಲಿ ಸಾಹಿತ್ಯವೇ ಕೇಂದ್ರ ಬಿಂದು. ಅದನ್ನು ಬಿಟ್ಟುಕೊಡಲಾಗದು. ಅದನ್ನು ಕಟ್ಟಿಕೊಂಡೇ ಜಾತ್ರಿಯನ್ನೂ ಮಾಡಬೇಕು.

★ **ಎಷ್ಟೊಂದು ನಿರ್ಣಯಗಳನ್ನು ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಂಡಿದ್ದೇವೆ. ಇದರಿಂದ ಏನಾದರೂ ಉಪಯೋಗ ಆಗುತ್ತದೆಯೆ?**

**ಚಂಪಾ:** ನಿರ್ಣಯಗಳ ಬಗ್ಗೆ ನಾನೂ ಸಂದೇಹವಾದಿಯೇ. ಆದರೆ ಕನ್ನಡ ಸಾಹಿತ್ಯ ಪರಿಷತ್ತು ರಾಜಕೀಯ ಪಕ್ಷವಲ್ಲ. ಒಟ್ಟಾರೆ ಜನರಿಗೆ ಬೇಕಾಗಿರೋ ಹಕ್ಕೊತ್ತಾಯಗಳ ಮೂಲ ಸ್ವರೂಪಕ್ಕೆ ಸಂಬಂಧಿಸಿ ನಿರ್ಣಯಗಳನ್ನು ಕೈಗೊಳ್ಳುತ್ತೇವೆ. ಅದೊಂದು ರಾಜಕೀಯ ಅಜೆಂಡಾ ಆಗಿ ಜಾರಿಗೆ ತರುವಂತಹ ನಿರ್ಣಯಗಳಲ್ಲ. ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಮುಂದಿನ ಸಮ್ಮೇಳನದ ವರೆಗೆ ಕಸಾಪ ದ ಕಾರ್ಯಕಾರಿ ಸಮಿತಿ ಸದಸ್ಯರಾಗಿರುತ್ತಾರೆ. ಅವರು ಕಸಾಪ ಅಧ್ಯಕ್ಷರ ಜತೆ ಸೇರಿ ರಾಜ್ಯದಾದ್ಯಂತ ಅಡ್ಡಾಡಿ ಕನ್ನಡದ ಕೆಲಸ ಮಾಡಬೇಕು. ಹೌದು, ಬಹಳ ಜನ ಅದನ್ನು ಮಾಡಿಲ್ಲ. ಅನಾರೋಗ್ಯವೋ, ಇಳಿವಯಸ್ಸೋ ಮುಂತಾದ ಕಾರಣಗಳಿವೆ. ಅಧ್ಯಕ್ಷರಾಗಿ ಮೆರೆದ ಬಳಿಕ ಬಹಳ ಜನ ಕಸಾಪದ ಹತ್ತಿರವೂ ಬರೋದಿಲ್ಲ. ನಮ್ಮ ಅನಂತಮೂರ್ತಿಯವರನ್ನೇ ತಗೊಳ್ಳಿ, ಬಳಿಕ ಪತ್ತೆ ಇಲ್ಲ, ನಮ್ಮ ನಿಸಾರ್ ಕೂಡಾ ಒಟ್ಟ.. ಬರಲಿಲ್ಲ. ಹಾಗೆಂದು ಸನ್ಮಾನಕ್ಕೆ, ಸಭೆಗಳಿಗೆ ಬರ್ತಾರೆ. ನಾನು ಹಿಂದಿನ ಅಧ್ಯಕ್ಷರ ಭಾಷಣಗಳನ್ನೆಲ್ಲ ನೋಡ್ತಿದ್ದೆ. ಬಹಳ ಹಿಂದಿನವರು ಕನ್ನಡದ ಪ್ರಚಾರವನ್ನು ಪಟ್ಟು ಹಿಡಿದು ಮಾಡಿದ್ದರು. ಈಗ ಸ್ವಲ್ಪ ವ್ಯತ್ಯಾಸ ಆಗಿದೆ.

★ **ಸಮ್ಮೇಳನವನ್ನೇನೋ ಭರ್ಜರಿಯಾಗಿ ಮಾಡುತ್ತೇವೆ. ಮಾತೃಭಾಷೆಯ ಕುರಿತು ಸುಪ್ರೀಂಕೋರ್ಟ್ ತೀರ್ಪು ಬಂದ ಬಳಿಕದ ಸ್ಥಿತಿ ಇದರಿಂದ ವ್ಯತ್ಯಾಸ ಆಗುತ್ತದೆಯೆ? ಕನ್ನಡ ಶಾಲೆಗಳ ಸ್ಥಿತಿ ಸುಧಾರಿಸಲು ಈ ಸಮ್ಮೇಳನದಿಂದ ಏನಾದರೂ ಪ್ರಯೋಜನ ಆಗಬಹುದೆ?**

**ಚಂಪಾ:** ಇದು ವಾಸ್ತವ. ಸಮ್ಮೇಳನಗಳ ಬಗ್ಗೆ ಬಹಳ ನಿರೀಕ್ಷೆ ಇಟ್ಟುಕೋಬೇಡಿ. ಅದಕ್ಕೂ ಮಿತಿಗಳಿವೆ. ಆದರೆ ಕನ್ನಡದ ಕುರಿತು ಬದ್ಧತೆಯ ಬಗ್ಗೆ ಹೇಳಲೇಬೇಕು. ಅದಕ್ಕೆ ಬರೀ ಪ್ರೀತಿ ಅಷ್ಟೇ ನಡೆಯುವುದಿಲ್ಲ. ಕ್ರಿಯಾಶೀಲತೆ ಬೇಕು. ಅದು ಜಿಲ್ಲೆ, ತಾಲ್ಲೂಕು ಎಲ್ಲ ಮಟ್ಟದಲ್ಲೂ ಬೇಕು. ಎಲ್ಲರೂ ಒಟ್ಟಾಗಿ ಕೆಲಸ ಮಾಡಿದರೆ ಪರಿಣಾಮ ಖಂಡಿತಾ ಆಗುತ್ತೆ. ಒತ್ತಡ